ಓ.ಎಸ್. ನಂ. 72/2014

ಪಿ.ಡಬ್ಲ್ಯು: 02 (A.Channabasappa)

ದಿನಾಂಕಃ 04-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 2 ನೇ ಪ್ರತಿವಾದಿ ಪರ – ಶ್ರೀ RR ವಕೀಲರಿಂದ.**

ವಾದಿ ಮತ್ತು ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ ಆದರೆ ನನ್ನ ಕುಲಸ್ಥರು. ಎಸ್.ಕೆ.ರುದ್ರಪ್ಪ ಮತ್ತು ಎಸ್.ಕೆ.ತಿಪ್ಪಣ್ಣ ಪರಿಚಯ ಇದೆ. ಎಸ್.ಕೆ.ರುದ್ರಪ್ಪನವರಿಗೆ ಮಕ್ಕಳು ಇಲ್ಲದ ಕಾರಣ ಅವರು 2 ನೇ ಪ್ರತಿವಾದಿಯನ್ನು ದತ್ತು ಪಡೆದಿದ್ದರು. ಅವರು ಎಷ್ಟನೇ ಇಸವಿಯಲ್ಲಿ ಹಾಗೂ ಯಾವ ಇಸವಿಯಲ್ಲಿ 2 ನೇ ಪ್ರತಿವಾದಿಯನ್ನು ದತ್ತು ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ದಾಖಲಾತಿಯ ಆಧಾರದ ಮೇರೆಗೆ ನಾನು 2 ನೇ ಪ್ರತಿವಾದಿಯನ್ನು ದತ್ತು ಪಡೆದಿದ್ದರು ಎಂದು ನಾನು ಹೇಳುತ್ತಿದ್ದೇನೆ ಎಂದರೆ ಆ ಬಗ್ಗೆ ನಾನು ಯಾವ ದಾಖಲಾತಿಯನ್ನು ನೋಡಿರುವುದಿಲ್ಲ ಆದರೆ ನನಗೆ ತಿಳಿದು ಬಂದ ಕಾರಣ ನಾನು ಆ ರೀತಿ ಹೇಳುತ್ತಿದ್ದೇನೆ. 2 ನೇ ಪ್ರತಿವಾದಿಯ ಅಣ್ಣ-ತಮ್ಮಂದಿರು ಹೇಳಿದ ಕಾರಣ ನನಗೆ ಗೊತ್ತಿರುತ್ತದೆ.

ಎಷ್ಟನೇ ಇಸ್ವಿಯಲ್ಲಿ ದತ್ತು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಸ್.ಕೆ.ತಿಪ್ಪಣ್ಣನವರಿಗೆ 9 ಜನ ಮಕ್ಕಳಿರುತ್ತಾರೆ. ಅವರುಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಹೌದು. ವಿಭಾಗವಾದ ನಂತರ ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಅವರು 1981 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ನಾನು ಸದರಿ ವಿಭಾಗದಲ್ಲಿ ಭಾಗಿ ಆಗಿರಲಿಲ್ಲ ಅವರು ಹೇಳಿದ ಕಾರಣ ನನಗೆ ತಿಳಿದು ಬಂತು. ಸದರಿ ವಿಭಾಗದಲ್ಲಿ ಯಾವ ಆಸ್ತಿ ಯಾರಿಗೆ ಹೋಗಿದೆ ಎಂದರೆ ನನಗೆ ಅಷ್ಟೊಂದು ಗೊತ್ತಿಲ್ಲ. ಅವರುಗಳು ಪತ್ರದ ಮುಖಾಂತರ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ಯಾವ ಆಸ್ತಿ ಯಾರಿಗೆ ಹೋಗಿದೆ ಎಂದು ನಾನೇ ಹೇಳಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಅದನ್ನು ನಾನು ವಾದಿಯನ್ನು ಕೇಳಿ ತಿಳಿದುಕೊಂಡಿರುತ್ತೇನೆ.

ದಾವೆಯನ್ನು ಎಷ್ಟೊ ಜನರ ವಿರುದ್ದ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಗೂ 2 ನೇ ಪ್ರತಿವಾದಿ ಒಡ ಹುಟ್ಟಿದವರು.

ಓ.ಎಸ್. ನಂ. 72/2014

ಪಿ.ಡಬ್ಲ್ಯೂ: 02 (A.Channabasappa)

ದಾವೆಗೆ ಸಂಬಂಧಿದಂತೆ ನಾನು ಪಾರಿಕತ್ತನ್ನು ನೋಡಿರುತ್ತೇನೆ ಅದನ್ನು ನಾನು ಪೂರ್ತಿಯಾಗಿ ನೋಡಿರುವುದಿಲ್ಲ. ಅದರಲ್ಲಿ ದಾವಾ ಸ್ವತ್ತು ವಾದಿಯ ಭಾಗಕ್ಕೆ ಬಂದಿರುತ್ತದೆ. ಅದಕ್ಕೆ ಸಂಬಂಧಿಸಿದ ಪಹಣಿ ಪತ್ರವನ್ನು 1981-1985 ರವರೆಗೂ ನೋಡಿರುತ್ತೇನೆ. ತದ ನಂತರದ ಪಹಣಿ ಪತ್ರಗಳನ್ನು ನಾನು ನೋಡಿರುವುದಿಲ್ಲ. ದಾವೆಯನ್ನು 2014 ರಲ್ಲಿ ಹೂಡಿರುತ್ತಾರೆ. ನಾನು, ನಾನು ನೋಡಿರುವ ಪಹಣಿ ಪತ್ರಗಳ ಆಧಾರದ ಮೇರೆಗೆ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿ ದಾವೆಯನ್ನು ಹೂಡಿದ ನಂತರ ಪಹಣಿ ಪತ್ರವನ್ನು ನೋಡಿರುವುದಿಲ್ಲ ಎಂದರೆ ಸರಿ. ನಾನು 1985 ರ ನಂತರದ ಪಹಣಿ ಪತ್ರವನ್ನು ನೋಡಿರುವುದಿಲ್ಲ ಎಂದರೆ ಸರಿ. ವಾದಿ, ಅವರ ಸಹೋದರರು ಹಾಗೂ 2 ನೇ ಪ್ರತಿವಾದಿರವರ ಮದ್ಯ ಆಸ್ತಿ ವಿಚಾರವಾಗಿ ನಡೆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಂಪೂರ್ಣವಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವಾಸ್ತಿಯ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ. ವಿಭಾಗ ಯಾರ ಮದ್ಯ ನಡೆದಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿರುತ್ತದೆ. ಪಾಲು ವಿಭಾಗ ಪತ್ರದಲ್ಲಿ ಸರ್ವೇ ನಂಬರ್ ಗಳು ಸರಿಯಾಗಿ ನಮೂದು ಆಗಿರುವುದಿಲ್ಲ ಎಂದರೆ ಅದರೆ ಬಗ್ಗೆ ನನಗೆ ಗೊತ್ತಿಲ್ಲ. ನಂತರದಲ್ಲಿ ಸರ್ವೇ ನಂಬರ್ ಗಳನ್ನು ಸರಿಪಡಿಸಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ದಾವಾ ಸ್ವತ್ತಿನ ಬಗ್ಗೆ ಮಾತ್ರ ನನಗೆ ಗೊತ್ತು. ದಾವಾ ಸ್ವತ್ತು ಮೊದಲನೇ ಬಾರಿ ಬರೆದ ಪಾಲು ವಿಭಾಗ ಪತ್ರದಲ್ಲಿ ನಮೂದಾಗಿರುವ ಸ್ವತ್ತುಗಿರುತ್ತದೆ. 2014 ರಲ್ಲಿ ನಾನು ದಾವಾಸ್ತಿಯ ಪಹಣಿ ಪತ್ರ ಯಾರ ಹೆಸರಿನಲ್ಲಿ ಇದೆ ಎಂದರೆ ನಾನು ನೋಡಿರುವುದಿಲ್ಲ. ಪ್ರತಿವಾದಿಗಳು ಹಾಗೂ ವಾದಿಯ ಮದ್ಯ ನಡೆದ ಮಾತು ಕತೆ-ಒಡಂಬಡಿಕೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಪರಿಚಯ ಇದೆ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮುಖಾಂತರ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಎಸ್.ಕೆ.ರುದ್ರಮುನಿ ತಂದೆ ಲೇಟ್ ರುದ್ರಪ್ಪರವರ ಸ್ವಂತ ಆಸ್ತಿ ಎಂದರೆ ಸರಿ. ಅದು ಅವರ ಸ್ವಾಧೀನಾನುಭವದಲ್ಲಿತ್ತು ಎಂದರೆ ಅದನ್ನು ವಾದಿಯ ಸ್ವಾಧೀನದಲ್ಲಿಯೇ ಇತ್ತು. ದಾವಾಸ್ತಿ ವಾದಿಯ ಸ್ವಾಧೀನದಲ್ಲಿರುವುದನ್ನು ನಾನು 35 ವರ್ಷಗಳಿಂದ ನೋಡಿರುತ್ತೇನೆ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮುಖಾಂತರ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತು ಎಂದರೆ ಗೊತ್ತಿಲ್ಲ. ವಾದಿ 1 ನೇ ಪ್ರತಿವಾದಿಯನ್ನು ಈ ದಾವೆಯನ್ನು ಯಾವ ಕಾರಣಕ್ಕಾಗಿ

ಸೇರಿರುತ್ತಾರೆ ಎಂದರೆ 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮುಖಾಂತರ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಕಾರಣ ಸೇರಿರುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೇ ಎಂದರೆ ಸುಳ್ಳು. ದಾವಾಸ್ತಿಯ ಸಮೀಪದಲ್ಲಿ ನಮ್ಮ ಆಸ್ತಿ ಇದ್ದು ಅದನ್ನು ನಾವು ಸಾಗುವಳಿ ಮಾಡುತ್ತಿದ್ದೇವೆ. ಅದರ ಸರ್ವೇ ನಂಬರ್ ನನಗೆ ನೆನಪಿಲ್ಲ. ದಾವಾಸ್ತಿಯ ಅಕ್ಕ-ಪಕ್ಕದಲ್ಲಿ ನಮ್ಮ ಆಸ್ತಿ, ಇರುವುದಿಲ್ಲ ಸ್ವಲ್ಪ ದೂರದಲ್ಲಿ ಇದೆ. ದಾವಾಸ್ತಿಯ ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದನ್ನು ನಾನು ನೋಡಿರುವುದಿಲ್ಲ. ನಾನು ದಾವಾಸ್ತಿಯನ್ನು ನೋಡಿರುವುದಿಲ್ಲ, ಕುಟುಂಬಸ್ಥರ ಬಗ್ಗೆ ನನಗೆ ಗೊತ್ತಿಲ್ಲ, ದತ್ತು ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಈಸಿ, ದತ್ತು, ಕ್ರಯ ಮತ್ತು ಮ್ಯುಟೇಶನ್ ಪತ್ರವನ್ನು ನೋಡಿರುವುದಿಲ್ಲ ಎಂದರೆ ಸರಿ.

ಪಾಟೀಸವಾಲುಃ ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.